ಸಾಮೂಹಿಕ ಗಂಗಾ ಕಲ್ಯಾಣ ಯೋಜನೆಗೆ ನಿಗದಿಪಡಿಸಿದ ಅನುದಾನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 184 (314)
ಸದಸ್ಯರ ಹೆಸರು : ಶ್ರೀ ಮಾರಿಹಾಳ್ ಶಿವರುದ್ರಪ್ಪ (ಕಿತ್ತೂರು)
ಉತ್ತರಿಸುವ ಸಚಿವರು : ಶ್ರೀ. ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು)

ಪ್ರಶ್ನೆಗಳು:–

ಅ) "ದೇವರಾಜ ಅರಸು ಹಿಂದುಳಿದ ವರ್ಗಗಳ ನಿಗಮ" ಇಲ್ಲಿ ಮಂಜೂರಾದ "ಸಾಮೂಹಿಕ ಗಂಗಾ ಕಲ್ಯಾಣ" ಯೋಜನೆಗೆ ನಿಗದಿಪಡಿಸಿದ ಅನುದಾನವೆಷ್ಟು?

ಆ) ಮೇಲ್ಕಂಡ ಯೋಜನೆಯ "ಸಾಮೂಹಿಕ ಘಟಕಕ್ಕೆ" ಕೊಳವೆ ಬಾವಿ ಕೊರೆಸಲು, ಪಂಪ್‌ಸೆಟ್ ಖರೀದಿಸಲು ಹಾಗೂ ವಿದ್ಯುತ್ ಸಂಪರ್ಕ ಕಲ್ಪಿಸಲು ನಿಗದಿಪಡಿಸಿದ ಅನುದಾನವೆಷ್ಟು?

ಇ) ಹಾಗಾದರೆ, ಮೇಲ್ಕಂಡ ಯೋಜನೆಯಲ್ಲಿ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ದೂರವಿದ್ದಾಗ, ವಿದ್ಯುತ್ ಸಂಪರ್ಕ ಕಲ್ಪಿಸಿಕೊಡಲು ವಿದ್ಯುತ್ ಕಂಬಗಳನ್ನು (ಪೋಲ್) ಪೂರೈಸಲು ಐದು (ಪೋಲ್‌ಗಳ) ವಿದ್ಯುತ್ ಕಂಬಗಳ ಗರಿಷ್ಠ ಸಂಖ್ಯೆ ನಿಗದಿ ಮಾಡಿದೆಯೇ? (ವಿವರ ಒದಗಿಸುವುದು);

ಉತ್ತರಗಳು:–

ಅ) 2011–12ನೇ ಸಾಲಿಗೆ ಸಾಮೂಹಿಕ ಗಂಗಾ ಕಲ್ಯಾಣ ಯೋಜನೆಗೆ ರೂ. 1200.00 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದೆ.

ಆ) ಸಾಮೂಹಿಕ ನೀರಾವರಿ ಘಟಕಕ್ಕೆ ಕೊಳವೆ ಬಾವಿ ಪಂಪ್‌ಸೆಟ್ ಮತ್ತು ವಿದ್ಯುತ್ ಸಂಪರ್ಕ ಕಲ್ಪಿಸಲು ಈ ಕೆಳಕಂಡಂತೆ ಅನುದಾನ ನಿಗದಿಪಡಿಸಲಾಗುತ್ತದೆ.

1. ಕನಿಷ್ಠ 08 ಎಕರೆಯಿಂದ 15 ಎಕರೆವರೆಗೆ – ರೂ. 2.53 ಲಕ್ಷಗಳು ಜಮೀನು ಹೊಂದಿರುವ ಘಟಕಕ್ಕೆ (02 ಕೊಳವೆ ಬಾವಿಗಳು)
2. 15 ಎಕರೆಗಿಂತ ಹೆಚ್ಚಿನ ಜಮೀನು ಹೊಂದಿರುವ – ರೂ. 3.59 ಲಕ್ಷಗಳು ಘಟಕಕ್ಕೆ (03 ಕೊಳವೆ ಬಾವಿಗಳು)

ಇ) ಗಂಗಾ ಕಲ್ಯಾಣ ಯೋಜನೆಯಲ್ಲಿ ಕೊರೆದ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ದೂರವಿದ್ದಾಗ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡಲು ವಿದ್ಯುತ್ ಕಂಬಗಳ ಗರಿಷ್ಠ ಸಂಖ್ಯೆಯನ್ನು ನಿಗದಿಪಡಿಸಿರುವುದಿಲ್ಲ.

ನೇಸರಗಿ ಪೋಲೀಸ್ ವಸತಿ ಗೃಹಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 185 (315)
ಸದಸ್ಯರ ಹೆಸರು : ಶ್ರೀ ಮಾರಿಹಾಳ್ ಸುರೇಶ್ ಶಿವರುದ್ರಪ್ಪ (ಕಿತ್ತೂರು)
ಉತ್ತರಿಸುವ ಸಚಿವರು : ಶ್ರೀ ಆರ್. ಅಶೋಕ್ (ಗೃಹ ಮತ್ತು ಸಾರಿಗೆ ಸಚಿವರು)

ಪ್ರಶ್ನೆಗಳು:–

ಅ) ಕಿತ್ತೂರ ವಿಧಾನಸಭಾ ವ್ಯಾಪ್ತಿಗೆ ಬರುವ ನೇಸರಗಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವಸತಿಗೃಹಗಳ ನಿರ್ಮಾಣಕ್ಕಾಗಿ ಅನುದಾನ ಮಂಜೂರು ಮಾಡಲು ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ನೇಸರಗಿ ಪೊಲೀಸ್ ವಸತಿಗೃಹಗಳ ನಿರ್ಮಾಣವನ್ನು ಯಾವಾಗ ಪ್ರಾರಂಭಿಸಲಾಗುವುದು?

ಉತ್ತರಗಳು:–

ಅ) ಕಿತ್ತೂರು ವಿಧಾನಸಭಾ ವ್ಯಾಪ್ತಿಗೆ ಬರುವ ನೇಸರಗಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವಸತಿಗೃಹಗಳ ನಿರ್ಮಾಣಕ್ಕಾಗಿ ಅನುದಾನ